## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ.4/2018

ಅ.ಸಾ : **08**

ದೋಸಾ: 18

| | | |
|---|---|---|
| ಸಾಕ್ಷಿದಾರರ ಹೆಸರು | : | ಮುರಗೆಪ್ಪಗೌಡ ಪಾಟೀಲ |
| ತಂದೆಯ ಹೆಸರು | : | ಬಂಗಾರೆಪ್ಪಗೌಡ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಅಧೀಕ್ಷಕ ಅಭಿಯಂತರರು, |
| ವಾಸ ಸ್ಥಳ | : | ಧಾರವಾಡ |

ದಿನಾಂಕ:**16/10/2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ: –**

1. ಎಪ್ರೀಲ್-2018 ರಿಂದ ಜೂನ್-2020 ರವರೆಗೆ ನಾನು ಅಧೀಕ್ಷಕ ಅಭಿಯಂತರರು, ಹೆಸ್ಕಾಂ, ಹಾವೇರಿ ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:04/05/2018 ರಂದು ಎಸಿಬಿ ಅಧಿಕಾರಿಗಳು 9 ದಾಖಲೆ ಸಹಿತ ಮನವಿ ಸಲ್ಲಿಸಿ ಆರೋಪಿ ವಿರುದ್ಧ ಮಾಡಲಾದ ಆರೋಪಗಳಿಗೆ ವಿಚಾರಣೆ ನಡೆಸಲು ಅನುಮತಿ ಕೇಳಿದ್ದರು. ದಾಖಲೆಗಳನ್ನು ಪರಿಶೀಲಿಸಿ ಅಭಿಯೋಜನೆಗೆ ಮಂಜೂರಾತಿ ನೀಡಿದೆ. ಸದರಿ ಮಂಜೂರಾತಿಯನ್ನು ಈಗ ನಿಪಿ-40, ನನ್ನ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ನೇ ಆರೋಪಿ ಪರ: ಶ್ರೀ ಯು.ಎನ್.ಜಿ. ವಕೀಲರಿಂದ:–**

3. ಗ್ರಾಹಕರು ಅರ್ಜಿ ಸಲ್ಲಿಸಿ ಆರ್.ಆರ್. ನಂಬರ ಪಡೆದ ನಂತರ ವಿದ್ಯುತ್ ಸಂಪರ್ಕ ಪಡೆಯಬಹುದು ಎನ್ನುವುದು ನಿಜ. ಅಕ್ರಮ ವಿದ್ಯುತ್ ಸಂಪರ್ಕ ಪಡೆದಿದ್ದಾಗಿ ನಿಪಿ-26 ರಂತೆ ಅರ್ಜಿ ಸಲ್ಲಿಸಲಾಗಿತ್ತು ಎನ್ನುವುದು ನಿಜ. ನಮ್ಮ ಅಭಿಯಂತರರು ನಿಪಿ-18 ರಂತೆ ಅಂದಾಜು ಪಟ್ಟಿ ತಯಾರಿಸಿ ಕೊಟ್ಟಿದ್ದರು ಎನ್ನುವುದು ನಿಜ. ನಿಪಿ-19 ರ ಮೂಲಕ ಹಣ ತುಂಬಲಾಗಿದೆ ಎನ್ನುವುದು ನಿಜ. ನಿಪಿ-35 ರ ಮೂಲಕ ಆರ್.ಆರ್. ನಂಬರ ನೀಡಲಾಗಿದೆ ಎನ್ನುವುದು ನಿಜ. ದಿನಾಂಕ:03/12/2014 ರ

ನಂತರ ಆರೋಪಿ ಹತ್ತಿರ ಚಾಸಾ-1 ರ ಕೆಲಸ ಬಾಕಿ ಇರಲಿಲ್ಲ ಅಂದರೆ ಲೈನ್ ಕೆಲಸ ಬಾಕಿ ಇದ್ದದ್ದು ಗೊತ್ತಾಗುವುದಿಲ್ಲ. ಲೈನ ವರ್ಕ ಇಲಾಖೆಯ ಕೆಲಸ ಅದು ಶಾಖಾಧಿಕಾರಿ ಕೆಲಸ ಅಲ್ಲ ಎನ್ನುವುದು ಸುಳ್ಳು. ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಅಭಿಯೋಜನಾ ಮಂಜೂರಾತಿ ನೀಡಿದ್ದೇನೆ ಎನ್ನುವುದು ಸುಳ್ಳು.

**ಮರುವಿಚಾರಣೆಃ** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.